ವಿದ್ಯಾರ್ಥಿಗಳಿಗೆ ಗೈಡ್ ಮಾಡುವ ಅವಕಾಶ ಸಿಕ್ಕದಿರುವ ದಿನಗಳು ಇಂದ್ರ-ಚಂದ್ರ-ನರೇಂದ್ರರಿಗೂ ಬೇಸರ ತರಿಸುತ್ತಿತ್ತು.

ಮೂರು ವರ್ಷಗಳ ಹಿಂದಷ್ಟೇ ತಮ್ಮ ಐದು ವರ್ಷಗಳ ಸರ್ವಿಸನ್ನು ಪೂರೈಸಿ ಗೈಡಾಗುವ ಅರ್ಹತೆ ಪಡೆದುಕೊಂಡ ನಾಗರಾಜರು ಬರೋಬ್ಬರಿ ನಾಲ್ಕು ಜನರನ್ನು ವಿವಿಧ ಕ್ರೈಟೀರಿಯಾಗಳನ್ನು 'ಸರ್ರಾಗಿ' ನೋಡಿಕೊಂಡು ಆಯಕಟ್ಟಿನ ಜಾಗದಲ್ಲಿ ಕೆಲಸ ಮಾಡುತ್ತಿದ್ದ ಸಿಸ್ಯ-ಸಿಸ್ಯೆಯರನ್ನೇ ಆರಿಸಿಕೊಂಡಿದ್ದರು. ಆ ನಾಲ್ಕು ಜನರಲ್ಲಿ ಮೂರು ಜನರನ್ನು ಮೂರೇ ವರ್ಷಕ್ಕೆ ಅವಾರ್ಡ್ ಮಾಡಿಕಳಿಸಿದ್ದ ಇವರಿಗೆ ದೊರೆತ ತಕ್ಕಸಿಸ್ಯ-ಗುರುಮೆಚ್ಚಿದ ಸಿಸ್ಯನೇ ಈ ಅನಾಮತ್ತಿ ಶೇಖರಿ.

ಶೇಖರಿ ಸಾಮಾನ್ಯವಾದವನೇನಲ್ಲ. ಅಂಗನವಾಡಿ ಸಮೇತ ಎಲ್ಲವನ್ನು ಅಂಚಂಚಲ್ಲಿ ಜಸ್ಟ್ ಪಾಸು ಮಾಡಿಕೊಂಡು ಬಂದಿದ್ದ ಶುದ್ಧ ದೇಸಿ ಪ್ರತಿಭೆ. 'ನಮ್ಮೊನ್..', 'ತಾಯ್ನಾ...' ಎಂದೇ ಬಾಯ್ದೆರೆಯುತ್ತಿದ್ದ ಶೇಖರಿಯು ವಯಸ್ಸು-ಡೆಸಿಗ್ನೇಶನಲ್ಲಿ ಯಾರಿಗೂ ಭೇದಭಾವ ತೋರದೆ ಈಗಾಗಲೇ ವಿಶ್ವವಿದ್ಯಾನಿಲಯದ ಅನೇಕ ಪ್ರಾಧ್ಯಾಪಕರುಗಳಿಗೆ ತನ್ನ ಮಾತಿನ ಖದರ್ ತೋರಿಸಲು ಹೋಗಿ ಅಂಡು ಸುಟ್ಟುಕೊಂಡ ಬೆಕ್ಕಿನಂತೆ ಪರದಾಡಿದ್ದ. ಆದರೂ ಒಮ್ಮೊಮ್ಮೆ ಅವನ ರಿಪೋರ್ಟ್‌ಗಳಿಗೆ ಅವನು ತೋರಿಸಿದ್ದಲ್ಲಿಗೆ ಸಹಿ ಮಾಡದೆ ಹೆಚ್ಚು-ಕಮ್ಮಿ ಮಾತಾಡಿ ಹದಗೆಡಿಸುತ್ತಿದ್ದ ನಾಗರಾಜರಿಗೆ ಆ ಗಳಿಗೆಯೇ, ನಮ್ಮೊನ್ ಎಷ್ಟ್ ಕುಡಿಸಿಲ್ಲ, ಎಷ್ಟು ತಿನ್ನಿಸಿಲ್ಲ ನಿಂಗೆ. ಎಣಿಸಿಲ್ವ ಅಲ್ಲಿ ತಿಂಗ್ಳೂ ತಿಂಗ್ಳೂ, ನಂಗೆ ಆಟಾ ಆಡಿಸ್ತೀಯಾ? ನಮ್ಮೊನ್... ಎನ್ನಬೇಕು ಅನ್ನಿಸುತ್ತಿತ್ತಾದರೂ ತನ್ನದೇ ಜಾತಿಯವರು ಎಂಬ ಒಂದೇ ಒಂದು ಕಾರಣಕ್ಕೆ ಅವನ ಬಾಯಿಂದ ಬರುತ್ತಿದ್ದ ಈ 'ನಮ್ಮೊನ್', 'ತಾಯ್ನ' ಎಂಬಸ್ತ್ರಗಳನ್ನು ಪ್ರಯೋಗಿಸದೆ ಬರೀ ಗುರಾಯಿಸುತ್ತಿದ್ದ. ಈ ನೋಟಾಸ್ತ್ರವನ್ನು ಎದುರಿಸಲೂ ಶೇಖರಿಯನ್ನು ಬೈಯಲೂ ಆಗದೆ ಗೈಡ್ ನಾಗರಾಜರು ತಮಗೆ ಭೂಷಣವಲ್ಲದಿದ್ದರೂ ಕೂತಲ್ಲೇ ನಡು ಬಗ್ಗಿಸುತ್ತಿದ್ದರು.

ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೂ, ಎಕ್ಸ್‌ವೈಜ್ಡ್ ವಿಷಯಗಳ ಸ್ವಘೋಷಿತ ತಜ್ಞರೂ ಆಗಿದ್ದ ನಾಗರಾಜರು ಒಬ್ಬ ಸ್ಟೂಡೆಂಟ್‌ಗೆ ಹೆದರುವಲ್ಲೂ, ಅವನ ಎಲ್ಲಾ ತಪ್ಪುಗಳನ್ನು ಹೊಟ್ಟೆಗಾಕಿಕೊಂಡು, ಅವನು ಬರ್ದಂಗೆಲ್ಲಾ ಪಿಎಚ್.ಡಿ ನೂಕಿಕೊಂಡು ಹೋಗುವಲ್ಲೂ ಇವರಿಬ್ಬರ ಮಧ್ಯದಲ್ಲಿ ಅನೇಕ ಗುಟ್ಟುಗಳಿದ್ದವು. ಆ ಗುಟ್ಟುಗಳಲ್ಲಿ ಕೆಲವನ್ನು ಒಮ್ಮೊಮ್ಮೆ ಬಾರಿನಲ್ಲೋ, ಕ್ಯಾಂಪಸ್‌ನ ಗೆಳೆಯರಲ್ಲೂ ಅಂಗೊಂದು ಇಂಗೊಂದು ಹೇಳಿಕೊಂಡು ಮಜಾ ತಗೋತಿದ್ದ ಶೇಖರಿಯ ಜುಟ್ಟು ಗೈಡ್ ನಾಗರಾಜರ ಕೈಯಲ್ಲೂ; ನಾಗರಾಜರ ಜುಟ್ಟು ಪ್ಲಸ್ ಉಡುದಾರ ಶೇಖರಿಯ ಕೈಯಲ್ಲೂ ಇದ್ದವು.

ಶೇಖರಿ ಹೇಳಿಕೇಳಿ ಕುದುರೆ ನಾಗರಾಜರ ಊರಿನವನೇ. ಇಷ್ಟು ವರ್ಷ ಕಾದು ಯಾರ್‍ಯಾರ ಬಳಿಯೋ ಪಿಎಚ್.ಡಿ ಸೀಟು ಕೇಳಿ ಅವರೆಲ್ಲರೂ ಇವನ 'ನಮ್ಮೊನ್' ಮರ್ಯಾದೆಯನ್ನು ಹತ್ತಿರದಿಂದ ನೋಡಿದ್ದವರಾಗಿದ್ದು ಇವನ ಸಹವಾಸವೇ ಬೇಡವೆಂದು ಕೈಬಿಟ್ಟದರು. ಈ ಕಾರಣದಿಂದ ಬಿ.ಇಡಿ ಸೇರಿ ಅದನ್ನೂ ಮುಗಿಸಿಕೊಳ್ಳುವ ಹೊತ್ತಿಗೆ ಗೈಡ್ ನಾಗರಾಜರಿಗೆ ಸ್ವಜಾತಿ ಅಭಿಮಾನ ಎಚ್ಚರವಾಗಿ ಶೇಖರಿಗೆ ವಿಶ್ವವಿದ್ಯಾನಿಲಯದಲ್ಲಿ ಪಿಎಚ್ಡಿ ಸೀಟು ನೀಡಿದ್ದರು. ನನ್ನ ಜಾತಿಯವನೊಬ್ಬ ಬಳಿ ಇದ್ದರೆ ನನಗೂ ಒಂಚೂರು ಬಲ ಇರುತ್ತೆ, ಅದೂ ಅಲ್ಲದೇ ಸಿಕ್ಕ ಸಿಕ್ಕವರಿಗೆಲ್ಲಾ ಅವಾಜ್ ಹಾಕುತ್ತಾ ಕೈಮಾಡಲು ಹೋಗುವ ಇವನಂಥ ಸಿಸ್ಯ ನನ್ನ ಬಳಿ ಇದ್ರೆ ಯಾರೂ ನನ್ನ ತಂಟೆಗೆ ಬರೋಲ್ಲ. ಬಿಟ್ಟಿ ಬಾಡಿಗಾರ್ಡ್ ಆದಂಗೂ ಆಯ್ತು. ಜಾತಿ ಬಲವೂ ಸಿಕ್ತು! ಇತ್ಯಾದಿ ಹತ್ತು ಹಲವು ಘನಂಧಾರಿ ಲಾಭಗಳನ್ನು ಊಹಿಸಿ ನಾಗರಾಜರು ಶೇಖರಿಯನ್ನು ಸೇರಿಸಿಕೊಂಡು 'ಬಡ ಜಾತಿಯ, ಬಡ ಹುಡುಗನಿಗೆ ಸೀಟ್ ಕೊಟ್ಟೆ. ಇದು ನೋಡಿ ನಮ್ಮ ಎಕ್ಸ್‌ವೈಜ್ಡ್ ನ್ಯಾಯ' ಎಂದು ವಿಶ್ವವಿದ್ಯಾನಿಲಯದ ತುಂಬ ಎದೆಯುಬ್ಬಿಸಿ ಓಡಾಡುವಾಗೆಲ್ಲ ಕೈಯಲ್ಲಿ ತಲೆಯನ್ನು ಕ್ರಾಫ್ ಮಾಡಿಕೊಳ್ಳುತ್ತಿದ್ದರು.

ಈ ಪ್ರಕಾರವಾಗಿ ಕ್ಯಾಂಪಸ್‌ನಲ್ಲಿ ಜೀವನ ದೂಡುತ್ತಿದ್ದ ನಾಗರಾಜರು ಒಮ್ಮೆ-

ರಂಗಗೀತೆ, ಏಕ ಪಾತ್ರಾಭಿನಯದಲ್ಲಿ ಅಪಾರ ಆಸಕ್ತಿಯುಂಟಾಗಿ ಒಂದಿನ ಸಂಜೆ ವಿಭಾಗದ ಕೆಮಿಸ್ಟ್ರಿ ಲ್ಯಾಬ್ ಕಾರಿಡಾರ್‌ನಲ್ಲಿ ಯಾವುದೋ ಒಂದು ರಂಗ ಗೀತೆಯನ್ನು ತುಸು ಗಟ್ಟಿಯಾಗೇ ಗುನುಗಿಕೊಂಡು, ತಮ್ಮ ಫುಲ್ ಮೀಲ್ಸ್, ಡ್ರೈಫ್ರೂಟ್ಸ್ ತಂದಿದ್ದ ಲೆದರ್ ಬ್ಯಾಗ್ ನೇತಾಕಿಕೊಂಡು ಬರುತ್ತಿದ್ದರು. ಎದುರುಗಡೆಯಿಂದ ಬಂದ ಲಿಂಗ್ವಿಸ್ಟಿಕ್ ವಿಭಾಗದ